

ಈ ಚಿತ್ರ ಸೆರೆಹಿಡಿದ ಆರತಿ ಕುಮಾರ್ ರಾವ್ ಭಾರತದ ಮಹಿಳಾ ಫೋಟೊಗ್ರಾಫರ್‌ಗಳಲ್ಲಿ ಬಹು ಮುಖ್ಯವಾದವರು.

ಒಬ್ಬರೇ ರವೀಂದ್ರನಾಥ ಟ್ಯಾಗೋರ್ ಅವರ 25 ಛಾಯಾಚಿತ್ರಗಳ ಸರಣಿಯನ್ನು ತೆಗೆದರು. ಈ ಸಹೋದರಿಯರ ಮೊದಲ ಚಿತ್ರ ಹೆಸರಿನ ಸಮೇತ ಪ್ರಕಟಗೊಂಡಿದ್ದು 1937ರಲ್ಲಿ 'ಸುಚಿತ್ರೋ ಭಾರತ್' ಎಂಬ ಪತ್ರಿಕೆಯಲ್ಲಿ.

## ಹೋಮ್ಮೈ ಹೆಜ್ಜೆಗುರುತು

ಇದುವರೆಗೆ ಉಲ್ಲೇಖಿಸಿದ ಹಲವು ಮಹಿಳೆಯರು ತೆಗೆದ ಚಿತ್ರಗಳು ಆಗಾಗ ಪತ್ರಿಕೆಗಳಲ್ಲಿ ಪ್ರಕಟವೇನೋ ಆಗುತ್ತಿದ್ದವು. ಆದರೆ ಪತ್ರಿಕಾಮನೆಗಳಲ್ಲಿ ಮಹಿಳಾ ಫೋಟೊಗ್ರಾಫರ್ಸ್ ನೇಮಕ ಮಾಡಿಕೊಳ್ಳುವಷ್ಟು ಹಿಂದುಮುಂದು ನೋಡುವ ಪರಿಸ್ಥಿತಿಯಂತೂ ಇದ್ದೇ ಇತ್ತು. ಅಂಥ ಸಂದರ್ಭದಲ್ಲಿ ಸುದ್ದಿಮನೆಯನ್ನು ಹೊಕ್ಕು ತಮ್ಮದೇ ಛಾಪು ಮೂಡಿಸಿದ ಹೆಣ್ಣು ಹೋಮ್ಮೈ ವ್ಯಾರಾವಾಲಾ. ಇವರನ್ನು ಭಾರತದ ಮೊಟ್ಟ ಮೊದಲ ಫೋಟೊ ಜರ್ನಲಿಸ್ಟ್ ಎಂದು ಗುರ್ತಿಸಲಾಗುತ್ತದೆ. ಈ ಲೇಖನದ ಆರಂಭದಲ್ಲಿರುವ ಮಾತು ಅವರದ್ದೇ. ಜನರು ತನ್ನನ್ನು ವಿಚಿತ್ರವಾಗಿ, ತಮಾಷೆಯಿಂದ ನೋಡುತ್ತಿದ್ದಾರೆ, ಯಾರೂ ತನ್ನನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ ಎನ್ನುವುದು ಹೋಮ್ಮೈ ಅವರ ದಾರಿಗೆ ತಡೆಯೇನೂ ಆಗಲಿಲ್ಲ. ಬದಲಿಗೆ ಅದು ಹೊಸ ಅವಕಾಶಗಳ ಬಾಗಿಲನ್ನು ತೆರೆಯಿತು. ಅದರ ಕುರಿತು ಅವರೇ ಹೇಳಿರುವ ಮಾತುಗಳು ಹೀಗಿವೆ ನೋಡಿ: 'ಜನರು ನನ್ನನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿರಲಿಲ್ಲ. ಇದು ನನಗೆ ಅವಕಾಶವಾಗಿಯೇ ಒದಗಿಬಂದಿತು. ನಾನು ಸುಲಭವಾಗಿ ಎಲ್ಲ ಕಡೆಗಳಲ್ಲಿ ಪ್ರವೇಶ ಪಡೆದುಕೊಳ್ಳಲು, ಎಲ್ಲ ರೀತಿಯ ಚಿತ್ರಗಳನ್ನು ತೆಗೆದುಕೊಳ್ಳಲು ಸಾಧ್ಯವಾಯಿತು'. ದಾರಿಗೆ ಅಡ್ಡಲಾದ ತಡೆಗೋಡೆಯನ್ನೇ ಆಕಾಶವನ್ನು ಮುಟ್ಟುವ ಏಣಿಯಾಗಿಸಿಕೊಳ್ಳುವುದಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಬೇಕೆ?

ಹೋಮ್ಮೈ ವೃತ್ತಿಯ ದಾರಿ ಅಷ್ಟು ಸುಲಭದ್ದೇನೂ ಆಗಿರಲಿಲ್ಲ. ಹೋಮ್ಮೈ 1913ರಲ್ಲಿ ಗುಜರಾತ್‌ನ ಪಾರ್ಸಿ ಕುಟುಂಬದಲ್ಲಿ ಜನಿಸಿದರು. ಅವರು ಫೋಟೊ ಜರ್ನಲಿಸ್ಟ್ ಆಗಿ ಕೆಲಸ ಪ್ರಾರಂಭಿಸಿದ್ದು ಮುಂಬೈ ಮೂಲಕ 'ಇಲ್ಲಸ್ಟ್ರೇಟೆಡ್ ವೀಕ್ಲಿ'ಯ ಮೂಲಕ. ಆರಂಭದ ದಿನಗಳಲ್ಲಿ ಅವರು ತೆಗೆದ ಚಿತ್ರಗಳು ಅವರ ಗಂಡನ ಹೆಸರಿನಲ್ಲಿ ಪ್ರಕಟವಾಗುತ್ತಿದ್ದವು. ನಂತರ 'ಡಾಲ್ಡಾ 13' ಎಂಬ ಹೆಸರಿನಲ್ಲಿ ಅವರ ಚಿತ್ರಗಳು ಪ್ರಕಟವಾಗುತ್ತಿದ್ದವು.

1942ರಲ್ಲಿ ದೆಹಲಿಗೆ ವಲಸೆ ಹೋಗಿ 'ಬ್ರಿಟಿಷ್ ಇನ್‌ಫಾರ್ಮೇಷನ್ ಸರ್ವಿಸ್'ನಲ್ಲಿ ಪ್ರೆಸ್ ಫೋಟೊಗ್ರಾಫರ್ ಆಗಿ ಸೇರಿಕೊಂಡ ಮೇಲೆ ಅವರ ಚಿತ್ರಗಳು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದ ಖ್ಯಾತಿಯನ್ನು ತಂದುಕೊಡತೊಡಗಿದವು.

ಪ್ರೆಸ್ ಫೋಟೊಗ್ರಾಫರ್ ಆಗಿ ಅವರು ತೆಗೆದ, ಮಹಾತ್ಮ ಗಾಂಧಿ, ಜವಾಹರಲಾಲ್ ನೆಹರೂ, ಮಹಮ್ಮದ್ ಅಲಿ ಜಿನ್ನಾ, ಇಂದಿರಾ ಗಾಂಧಿ ಸೇರಿದಂತೆ ಹಲವು ಖ್ಯಾತನಾಮರ ಛಾಯಾಚಿತ್ರಗಳು ಅವರ ಪ್ರತಿಭೆಗೆ ಪುರಾವೆಯಂತಿವೆ.

1956ರಲ್ಲಿ ಹೋಮ್ಮೈ ಅವರು 'ಲೈಫ್' ಪತ್ರಿಕೆಗಾಗಿ ತೆಗೆದ, 14ನೇ ದಲೈಲಾಮ ನಾಥು ಲಾ ಮೂಲಕ ಭಾರತ ಪ್ರವೇಶಿಸುತ್ತಿರುವ ಚಿತ್ರ ಇಂದಿಗೂ ಅಮೂಲ್ಯವಾದ ದಾಖಲೆ.

1970ರಲ್ಲಿ ಪತಿ ತೀರಿಕೊಂಡ ಒಂದು ವರ್ಷದ ನಂತರ ಹೋಮ್ಮೈ ಛಾಯಾಗ್ರಹಣ ವೃತ್ತಿಯನ್ನೇ ಬಿಟ್ಟುಬಿಟ್ಟರು. ಇಂದಿನ ಯುವ ತಲೆಮಾರಿನ ಫೋಟೊಜರ್ನಲಿಸ್ಟ್ ಬಗ್ಗೆ ಅವರಿಗೆ ಅಸಾಧ್ಯ ಅಸಹನೆಯಿತ್ತು. ಆ ಗದ್ದಲದ ಗುಂಪಿನ ಭಾಗ ನಾನು ಆಗಲಾರೆ ಎಂದು ನಿರ್ಧರಿಸಿದ ಅವರು, 2012ರಲ್ಲಿ ತಾವು ತೀರಿಕೊಳ್ಳುವವರೆಗೆ, ಅಂದರೆ 40 ವರ್ಷಗಳ ಕಾಲ ಒಂದೇ ಒಂದು ಚಿತ್ರವನ್ನೂ ತೆಗೆಯಲಿಲ್ಲ!

## ಬದಲಾಗುತ್ತಿದೆ ಕಾಲ

ಫೋಟೊಗ್ರಫಿ ಕ್ಷೇತ್ರದಲ್ಲಿ ನಿರಂತರವಾಗಿ ಹೋರಾಡಿಯೇ ಮಹಿಳೆ ತನ್ನದೊಂದು ಜಾಗವನ್ನೇನೋ ಸೃಷ್ಟಿಸಿಕೊಂಡಿದ್ದಾಳೆ. ಆದರೆ ಕ್ಯಾಮೆರಾ ಹಿಡಿದ ಹೆಣ್ಣನ್ನು ನೋಡುವ ಜಗದ ಕಣ್ಣು ಬದಲಾಗಿದೆಯೇ? ಈಗಲೂ ಮದುವೆ ಮಂಟಪದಲ್ಲಿ, ಪ್ರತಿಭಟನೆಯ ಸ್ಥಳಗಳಲ್ಲಿ, ಕಾಡಿನ ದುರ್ಗಮ ದಾರಿಯಲ್ಲಿ ಕ್ಯಾಮೆರಾ ಹಿಡಿದ ಹೆಣ್ಣು ಕಂಡರೆ ನಮ್ಮ ಮುಖದಲ್ಲಿ ವ್ಯಂಗ್ಯದ, ಉಡಾಫೆಯ ನಗುವೊಂದು ಹಾದುಹೋಗುತ್ತದಲ್ಲ – ಆ ನಗುವೇ ಎಲ್ಲವೂ ಬದಲಾಗಿಲ್ಲ ಎಂಬುದನ್ನು ಸಾರಿ ಹೇಳುತ್ತದೆ.

ಆದರೆ ಈ ವ್ಯಂಗ್ಯದ ನಗುವಿಗೆ ಕ್ಯಾಮೆರಾ ಹಿಡಿದ ಮಹಿಳೆಯನ್ನು ತಡೆಯುವ ಶಕ್ತಿಯಂತೂ ಇಲ್ಲ. ದಟ್ಟ ಕಾಡುಗಳಲ್ಲಿ, ಹಕ್ಕಿ ಗೂಡುಗಳಲ್ಲಿ, ರಸ್ತೆ ಬೀದಿಗಳಲ್ಲಿ, ಮದುವೆ ಮಂಟಪದಲ್ಲಿ, ಪ್ರತಿಭಟನೆ, ಪತ್ರಿಕಾಗೋಷ್ಠಿ, ಜಾತ್ರೆಗಳಲ್ಲಿ, ಅಪರೂಪದ ವ್ಯಕ್ತಿಚಿತ್ರಗಳಲ್ಲಿ, ದಂಗೆಯ ಸ್ಥಳಗಳಲ್ಲಿ, ಫ್ಯಾಷನ್, ಸಿನಿಮಾಗಳಂಥ ಬಣ್ಣದ ಲೋಕಗಳಲ್ಲಿ 'ಕ್ಲಿಕ್' ಎಂದಷ್ಟೇ ಅಚಾನಕ್ಕಾಗಿ ಕ್ಯಾಮೆರಾ ಹಿಡಿದ ಹೆಣ್ಣು ನಮಗೆ ಎದುರಾಗಿ, ನಮ್ಮ ನಗುವನ್ನು ನಮ್ಮ ಮುಖಕ್ಕೇ ಎಸೆಯುತ್ತಲೇ ಇದ್ದಾಳೆ. ಹಾಗೆ ದಿಟ್ಟವಾಗಿ ನುಗ್ಗುವ ಮಹಿಳೆಯರ ಸಂಖ್ಯೆ ಹೆಚ್ಚುತ್ತಲೇ ಇದೆ. ತನ್ನನ್ನು ನೋಡಿ ನಗುವವರ ಪೊಳ್ಳುತನವನ್ನೂ ಫ್ರೇಮ್‌ನಲ್ಲಿ ಬಂಧಿಸಿಡಬಲ್ಲ ಕಣ್ಣು ಅವಳ ಕೈಯಲ್ಲಿನ ಕ್ಯಾಮೆರಾಗಿದೆ. ಇಂದು ಕ್ಯಾಮೆರಾ ಹಿಡಿದು ಕ್ಲಿಕ್ಕಿಸುತ್ತಿರುವುದು ಹೊರಗಿನ ಜಗತ್ತಷ್ಟೇ ಅಲ್ಲ, ಅವಳ ಒಳಗಿನ ಜಗತ್ತನ್ನೂ ಹೌದು. ಯಾಕೆಂದರೆ ಫೋಟೊ ಎನ್ನುವುದು ಕೇವಲ ಕ್ಯಾಮೆರಾ ಎದುರಿನ ಪರಿಸರದ ದಾಖಲೆ ಮಾತ್ರ ಅಲ್ಲವೇ ಅಲ್ಲ, ಅದು ಕ್ಯಾಮೆರಾ ಹಿಡಿದಿರುವವರ ಅಸ್ಮಿತೆಯ ದಾಖಲೆಯೂ ಹೌದು, ಅಲ್ಲವೇ?

ಪ್ರತಿಕ್ರಿಯಿಸಿ: feedback@sudha.co.in